# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 282(322) |
| 2 | ಸದಸ್ಯರ ಹೆಸರು | : | ಶ್ರೀ ಚಿದಾನಂದ್.ಎಂ.ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 29-01-2026 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸರ್ಕಾರಿ ಆಸ್ತಿ ಎಂದರೇನು: ಸದರಿ ಆಸ್ತಿಗಳ ನಿರ್ವಹಣೆ ರಕ್ಷಣೆ ಮಾಡಬೇಕಾದ ಹೊಣೆ ಯಾವ ಇಲಾಖೆಯ ಮೇಲೆ ಇರುತ್ತದೆ:</td><td>ಸರ್ಕಾರದ ಒಡೆತನದಲ್ಲಿರುವ ಸ್ವತ್ತುಗಳನ್ನು ಸರ್ಕಾರಿ ಆಸ್ತಿ ಎಂದು ಪರಿಗಣಿಸಲಾಗುತ್ತಿದ್ದು, ಇವುಗಳ ನಿರ್ವಹಣೆ ಮತ್ತು ರಕ್ಷಣೆಯು ಸಂಬಂಧಪಟ್ಟ ಸರ್ಕಾರದ ಇಲಾಖೆ/ಸಂಸ್ಥೆಯದ್ದಾಗಿರುತ್ತದೆ. ಬೆಂಗಳೂರು ನಗರ ಪಾಲಿಕೆಗಳ ಒಡೆತನದ ಆಸ್ತಿಗಳ ನಿರ್ವಹಣೆ ಮತ್ತು ರಕ್ಷಣೆಯು ಸಂಬಂಧಪಟ್ಟ ಪಾಲಿಕೆಯದ್ದಾಗಿರುತ್ತದೆ.</td></tr>
<tr><td>ಆ)</td><td>ಕಳೆದ ಐದು ವರ್ಷಗಳಲ್ಲಿ ಬಿಬಿಎಂಪಿ/ಜಿಬಿಎ ವ್ಯಾಪ್ತಿಯ ಎಷ್ಟು ಸರ್ಕಾರಿ ಆಸ್ತಿಗಳ ಒತ್ತುವರಿಯನ್ನು ತೆರವುಗೊಳಿಸಲಾಗಿದೆ; ಇದರಿಂದ ಎಷ್ಟು ಕುಟುಂಬಗಳು ನಿರಾಶ್ರಿತರಾಗಿದ್ದಾರೆ: (ಪ್ರತಿ ಪ್ರಕರಣಕ್ಕೂ ಪ್ರತ್ಯೇಕ ಮಾಹಿತಿ ನೀಡುವುದು)</td><td>ಗ್ರೇಟರ್ ಬೆಂಗಳೂರು ಪ್ರದೇಶದ ಪಾಲಿಕೆ ಒಡೆತನದ ಆಸ್ತಿಗಳಲ್ಲಿ ಆದ ಒತ್ತುವರಿಯನ್ನು ಈ ಕೆಳಕಂಡಂತೆ ತೆರವುಗೊಳಿಸಲಾಗಿರುತ್ತದೆ.
<table>
<tr><th>ಕ್ರ.ಸಂ</th><th>ಪಾಲಿಕೆ</th><th>ತೆರವುಗೊಳಿಸಿದ ಒತ್ತುವರಿ</th><th>ನಿರಾಶ್ರಿತರಾದ ಕುಟುಂಬಗಳು</th></tr>
<tr><td>1</td><td>ಪೂರ್ವ</td><td>0</td><td>0</td></tr>
<tr><td>2</td><td>ಪಶ್ಚಿಮ</td><td>0</td><td>0</td></tr>
<tr><td>3</td><td>ಉತ್ತರ</td><td>2</td><td>0</td></tr>
<tr><td>4</td><td>ದಕ್ಷಿಣ</td><td>0</td><td>0</td></tr>
<tr><td>5</td><td>ಕೇಂದ್ರ</td><td>1</td><td>0</td></tr>
</table>
ಬೆಂಗಳೂರು ಕೇಂದ್ರ ನಗರ ಪಾಲಿಕೆಯ ವಾರ್ಡ್:139 ಕಾಟನ್‌ಪೇಟೆ ಮುಖ್ಯರಸ್ತೆಯಲ್ಲಿ ಇರುವ ಪೀರ್ ಬೌಂಡ್ರಿ ಎಂದು ಕರೆಯಲ್ಪಡುವ ಪಾಲಿಕೆಯ ಸ್ವತ್ತಿನ ಪಿಐಡಿ ಸಂಖ್ಯೆ:30-27-139 ರ ಸ್ವತ್ತಿನಲ್ಲಿದ್ದ ಅನಧಿಕೃತ ಶೇಡ್‌ಗಳನ್ನು ತೆರವುಗೊಳಿಸಿ ಪಾಲಿಕೆ ವಶಕ್ಕೆ ಪಡೆಯಲಾಗಿದೆ.<br><br>ಬೆಂಗಳೂರು ಉತ್ತರ ನಗರ ಪಾಲಿಕೆಯ ವಾರ್ಡ್-13 ವಲಯ-1ರ ಕೊಡಿಗೇಹಳ್ಳಿ ವ್ಯಾಪ್ತಿಯ ಸಿಕ್ಯೂಎಎಲ್ ಬಡಾವಣೆ ಪಾರ್ಕ್-04, ಸರ್ವೆ ನಂ.52 ರಲ್ಲಿ ಒತ್ತುವರಿಯಾದ ಅನಧಿಕೃತ ಶೆಡ್‌ಗಳನ್ನು ತೆರವುಗೊಳಿಸಿ ಪಾಲಿಕೆ ವಶಕ್ಕೆ ಪಡೆಯಲಾಗಿರುತ್ತದೆ.</td></tr>
</table>

| | | |
|---|---|---|
| | | ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ-2ರ ಬಾಗಲಗುಂಟೆ ವಾರ್ಡ್ ನಂ.14 ರ ಸೋಪ್ ಫ್ಯಾಕ್ಟರಿ ಬಡಾವಣೆಯ ಸರ್ವೆ ನಂ.88 ಮತ್ತು 89 ರಲ್ಲಿ ಸರ್ಕಾರಿ ಸಿ.ಎ ಜಾಗದ ಸುಮಾರು 8000 ಚದರ ಅಡಿಗಳಷ್ಟು ಜಾಗವನ್ನು ಪಾಲಿಕೆ ವಶಕ್ಕೆ ಪಡೆಯಲಾಗಿರುತ್ತದೆ.<br>ಮೇಲ್ಕಂಡ ಸ್ವತ್ತುಗಳ ಒತ್ತುವರಿ ತೆರವಿನಿಂದ ಯಾವುದೇ ಕುಟುಂಬಗಳು ನಿರಾಶ್ರಿತರಾಗಿರುವುದಿಲ್ಲ. |
| ಇ) | ಸರ್ಕಾರಿ ಆಸ್ತಿಯನ್ನು ಒತ್ತುವರಿ ಮಾಡಿಕೊಂಡರೆ ಇರುವ ದಂಡ ಅಥವಾ ಶಿಕ್ಷೆ ಏನು; ಎಷ್ಟು ಜನರ ಮೇಲೆ ಪ್ರಕರಣ ದಾಖಲಿಸಲಾಗಿದೆ: | ಒತ್ತುವರಿ ಆದ ಜಾಗವು ಪಾಲಿಕೆಯ ಆಸ್ತಿಯಾಗಿದ್ದಲ್ಲಿ, ಗ್ರೇಟರ್ ಬೆಂಗಳೂರು ಕಾಯ್ದೆ 2024ರ ಕಲಂ 216 ರಂತೆ ಆಯಾ ನಗರ ಪಾಲಿಕೆಯ ಆಯುಕ್ತರುಗಳಿಗೆ ಒತ್ತುವರಿಯನ್ನು ಗೂಳಿಸುವ ತೆರವು ಅಧಿಕಾರವು ದತ್ತವಾಗಿರುತ್ತದೆ. ಮುಂದುವರೆದು, ಗ್ರೇಟರ್ ಬೆಂಗಳೂರು ಕಾಯ್ದೆ 2024ರ ಕಲಂ 319 ರಿಂದ 323 ರಂತೆ ಉಪವಿಧಿಗಳ ಉಲ್ಲಂಘನೆಗಾಗಿ ದಂಡ ಹಾಗೂ ನಿಯಮಾನುಸಾರ ಸೂಕ್ತ ಕ್ರಮವಹಿಸಲಾಗುವುದು. |
| ಈ) | ಒತ್ತುವರಿಗೆ ಪ್ರೇರಣೆ ನೀಡುವವರ ಅಥವಾ ಸಹಾಯ ಮಾಡುವವರ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು: | |
| ಉ) | ಬಿಬಿಎ ವ್ಯಾಪ್ತಿಯ ಸರ್ಕಾರಿ ಆಸ್ತಿ ರಕ್ಷಣೆ ಮಾಡಬೇಕಾದ ಜವಾಬ್ದಾರಿ ಯಾವ ಅಧಿಕಾರಿಗಳ ವ್ಯಾಪ್ತಿಗೆ ಬರುವುದು ಸರ್ಕಾರಿ ಆಸ್ತಿ ರಕ್ಷಣೆ ಮಾಡದ/ಒತ್ತುವರಿಗೆ ಅವಕಾಶ ಮಾಡಿಕೊಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; | |
| ಊ) | ಒತ್ತುವರಿ ತೆರವು ಪ್ರಕರಣಗಳಲ್ಲಿ ಎಷ್ಟು ಒತ್ತುವರಿದಾರರಿಗೆ ಬದಲೀ ನಿವೇಶನ ಅಥವಾ ವಸತಿ ವ್ಯವಸ್ಥೆಯನ್ನು ಸರ್ಕಾರ ಕಲ್ಪಿಸಿದೆ; ಕಲ್ಪಿಸದೇ ಇದ್ದಲ್ಲಿ ಕೋಗಿಲು ಪ್ರದೇಶದಲ್ಲಿ ಒತ್ತುವರಿ ಮಾಡಿದ ಒತ್ತುವರಿದಾರರಿಗೆ ಮಾತ್ರ ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರ ಮುಂದಾಗಿರುವುದೇಕೆ; ಇದು ಪಕ್ಷಪಾತವಲ್ಲವೇ: | ನಿಯಮಾನುಸಾರ ಅರ್ಹತೆ ಇದ್ದವರಿಗೆ ಮಾತ್ರ ಸೌಲಭ್ಯ ಕಲ್ಪಿಸಲಾಗುತ್ತದೆ. |
| ಋ) | ಒತ್ತುವರಿದಾರರಿಗೆ ವಸತಿ ಸೌಕರ್ಯ ಕಲ್ಪಿಸಿದಲ್ಲಿ ಪ್ರೇರಣೆ ನೀಡಿದಂತೆ ಆಗುವುದಿಲ್ಲವೇ? | ಅನ್ವಯಿಸುವುದಿಲ್ಲ. |

**ಸಂಖ್ಯೆ:ನಅಇ 24 ಬಿಬಿಎಸ್ 2026**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**